ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ : ಸಿ5(2)ಮುಂಬಡ್ತಿ/35/2020-21 ದಿನಾಂಕ : 25-11-2020

### ಜ್ಞಾ ಪ ನಾ

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರುಗಳ ಕಾರ್ಯ ನಿರ್ವಹಣಾ ವರದಿಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಪತ್ರದ ಸಂಖ್ಯೆ: ಸಿ5[2] ಪವ್ಯಬ.12/2019-20 ದಿನಾಂಕ: 07-11-2020.

* * * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧೀಕ್ಷಕರುಗಳಲ್ಲಿ ಈ ಜ್ಞಾಪನಾದೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿರುವ ಅಧೀಕ್ಷಕರುಗಳ 2015-16 ರಿಂದ 2019-20 ನೇ ಸಾಲಿನವರೆಗಿನ 05 ವರ್ಷಗಳ ಕಾರ್ಯ ನಿರ್ವಹಣಾವರದಿಗಳನ್ನು, ಶಿಸ್ತು ಪ್ರಕರಣ ಬಾಕಿ ಇಲ್ಲದೇ ಇರುವ ಬಗ್ಗೆ ಉಪ ನಿರ್ದೇಶಕರಿಂದ ದೃಢೀಕರಿಸಲ್ಪಟ್ಟ ದೃಢೀಕರಣ ಪತ್ರ ಹಾಗೂ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ಬಗ್ಗೆ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿ ಇವುಗಳನ್ನು ಸಲ್ಲಿಸಲು ತಿಳಿಸಿದೆ. ಈ ದಾಖಲೆಗಳನ್ನು ಸಿಬ್ಬಂದಿವಾರು ಡೋಸಿಯರ್‌ನ್ನು ಸಿದ್ದಪಡಿಸಿ, ಆದ್ಯತೆಯ ಮೇರೆಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಅ] ಅನುಬಂಧ-1 – ಉಲ್ಲೇಖ[1] ರಲ್ಲಿ ಬಡ್ತಿ ಮುಂದೂಡಿರುವ ಅಧೀಕ್ಷಕರುಗಳು 2019-20 ನೇ ಸಾಲಿನ ಕಾರ್ಯ ನಿರ್ವಹಣಾ ವರದಿಯನ್ನು ಮಾತ್ರ ಸಲ್ಲಿಸತಕ್ಕದ್ದು.

ಆ] ಅನುಬಂಧ-2 ರ ನೌಕರರು ಮೇಲಿನಂತೆ ಯಥಾ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

1. ಕಾರ್ಯ ನಿರ್ವಹಣಾ ವರದಿಗಳಲ್ಲಿ ಪರಿಶೀಲನಾಧಿಕಾರಿಗಳ ಹಾಗೂ ಅಂಗೀಕರಿಸುವ ಅಧಿಕಾರಿಗಳ ಷರಾ ಹಾಗೂ ಸಹಿಯನ್ನು **ಕಡ್ಡಾಯವಾಗಿ** ಪಡೆದು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಪುರಸ್ಕರಿಸಲಾಗುವುದಿಲ್ಲ.
2. ಪ್ರತಿಯೊಂದು ಸಿಬ್ಬಂದಿಯ ಸೇವಾ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
3. **ಒಂದು ವೇಳೆ ಪಟ್ಟಿಯಲ್ಲಿರುವ ಸಿಬ್ಬಂದಿಗಳ ವಿರುದ್ಧ ಶಿಸ್ತು ಪ್ರಕರಣ / ನ್ಯಾಯಾಲಯ ಪ್ರಕರಣ ಬಾಕಿ ಇದ್ದಲ್ಲಿಯೂ ಸಹ ಅವರುಗಳ ಕಾರ್ಯನಿರ್ವಹಣಾ ವರದಿಗಳನ್ನು ಹಾಗೂ ನಿಗಧಿತ ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರಗಳ ಪ್ರತಿಯನ್ನು ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.**
4. **ಈ ಹಿಂದೆ ಶಿಸ್ತು ಪ್ರಕರಣ ಬಾಕಿ ಇದ್ದ ಅಧೀಕ್ಷಕರುಗಳಲ್ಲಿ ಪ್ರಸ್ತುತ ಶಿಸ್ತು ಪ್ರಕರಣ ಇತ್ಯರ್ಥವಾಗಿದ್ದಲ್ಲಿ ಈ ಬಗ್ಗೆ ಧೃಡೀಕರಣ ಹಾಗೂ ಅವರುಗಳ ಕಾರ್ಯನಿರ್ವಹಣಾ ವರದಿಗಳನ್ನು ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸುವುದು.**
5. **ಅನುಬಂಧದ ಪಟ್ಟಿಯಲ್ಲಿ ಹೆಸರಿಲ್ಲದ ಜ್ಯೇಷ್ಠತೆಯಲ್ಲಿ ಹಿರಿಯರಾದ ಅಧೀಕ್ಷಕರಿದ್ದಲ್ಲಿ ಅವರುಗಳ ಕಾರ್ಯನಿರ್ವಹಣಾ ವರದಿಗಳನ್ನು ಹಾಗೂ ಇತರೆ ದಾಖಲೆಗಳನ್ನು ಸಹ ಸಲ್ಲಿಸುವುದು.**
6. **ಒಂದು ವೇಳೆ ಅರ್ಹ ಪ್ರಕರಣಗಳು ಕೈಬಿಟ್ಟಿದಂತಹ ಪಕ್ಷದಲ್ಲಿ ಪರಿಶೀಲಿಸಿಕೊಂಡು ಅರ್ಹ ಪ್ರಕರಣವಾಗಿದ್ದಲ್ಲಿ ನಿಮ್ಮ ಅಭಿಪ್ರಾಯದೊಂದಿಗೆ ಅಂತಹ ಸೂಕ್ತ ಪ್ರಸ್ತಾವನೆಯನ್ನು ಸಹ ಸಲ್ಲಿಸುವುದು.**

ಪ್ರತಿ ಸಿಬ್ಬಂದಿವಾರು ಮಾಹಿತಿ / ದಾಖಲೆಗಳನ್ನು ಒಳಗೊಂಡ ಡೋಸಿಯರನ್ನು ದಿನಾಂಕ: 30-11-2020 ರೊಳಗಾಗಿ ಈ ಕಛೇರಿಗೆ ಸಂಬಂಧಿಸಿದ ವಿಷಯ ನಿರ್ವಾಹಕರ ಮುಖೇನ ಮುದ್ದಾಂ, ಕಳುಹಿಸಿಕೊಡಲು ಸೂಚಿಸಲಾಗಿದೆ.

**ಷರಾ: ಮೇಲೆ ಮುಂಬಡ್ತಿ ಕುರಿತಂತೆ ಕೋರಿರುವ ಮಾಹಿತಿ/ದಾಖಲೆಗಳು ಮತ್ತು ವ್ಯತಿರಿಕ್ತ ಷರಾಗಳನ್ನು ನಿಗಧಿತ ಸಮಯದೊಳಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ದಾಖಲೆ ಮತ್ತು ಮಾಹಿತಿಗಳು ಸಲ್ಲಿಸದಿದ್ದಲ್ಲಿ ಪಟ್ಟಿಯಲ್ಲಿರುವ ಅಧಿಕಾರಿಗಳ ಮೇಲೆ ಯಾವುದೇ ವ್ಯತಿರಿಕ್ತ ಷರಾ ಇರುವುದಿಲ್ಲವೆಂದು ಭಾವಿಸಿ ಮುಂಬಡ್ತಿಗೆ ಕ್ರಮ ವಹಿಸಲಾಗುವುದು. ನಂತರ ಬಡ್ತಿಯಿಂದಾಗಿ ಉಂಟಾಗುವ ವ್ಯತಿರಿಕ್ತ ಪರಿಣಾಮಗಳಿಗೆ ಸಂಬಂಧಪಟ್ಟಂತಹ ಅಧಿಕಾರಿ/ನೌಕರರನ್ನು ಜವಾಬ್ದಾರನ್ನಾಗಿಸಿ ಸೂಕ್ತ ಶಿಸ್ತು ಕ್ರಮ ವಹಿಸಲಾಗುವುದು ಎಂದು ತಿಳಿಸಿದೆ.**

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

(ಸಿರಿಯಣ್ಣವರ ಲಲಿತ ಚಂದ್ರಶೇಖರ್)
ಜಂಟಿ ನಿರ್ದೇಶಕರು(ಆಡಳಿತ)

ಇವರಿಗೆ ಮುಂದಿನ ಕ್ರಮಕ್ಕಾಗಿ:-

1) ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಿಸಿದ ನಿರ್ದೇಶಕರಿಗೆ
2) ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು.

3) ಸಂಬಂಧಿಸಿದ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೆ
4) ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ
5) ಕಛೇರಿ ಪ್ರತಿ.

**ಈ ಅಧಿಕೃತ ಜ್ಞಾಪನವನ್ನು ಇಲಾಖೆಯ ಅಂತರಜಾಲ www.schooleduction.kar.nic.in ರಲ್ಲಿ ಪ್ರಕಟಿಸಲಾಗಿದೆ.**

ಅನುಬಂಧ-2

ಹೊಸದಾಗಿ ಪ್ರಸ್ತಾವನೆ ಸಲ್ಲಿಸಬೇಕಾರ ಅಧೀಕ್ಷಕರುಗಳ ವಿವರ.

| ಕ್ರ.ಸಂ | ಜೇಷ್ಠತಾ ಸಂಖ್ಯೆ | ಅಧಿಕಾರಿ/ ನೌಕರರ ಹೆಸರು ಮತ್ತು ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ಪೂರ್ಣ ವಿಳಾಸ |
|---|---|---|
| 01 | 392 | ನಾರಾಯಣ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಲಯ, ಮೈಸೂರು ಉತ್ತರ ವಲಯ, ಮೈಸೂರು ಜಿಲ್ಲೆ. |
| 02 | 403 | ಮಹದೇವಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಟಿ. ನರಸೀಪುರ, ಮೈಸೂರು ಜಿಲ್ಲೆ |
| 03 | 410 | ಕೆ. ಶಿವಪ್ರಸಾದ್,ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿತ್ರದುರ್ಗ |
| 04 | 411 | ಜಿ.ಎಸ್. ಸಿದ್ದೇಶ್ವರ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ, ದಾವಣಗೆರೆ |
| 05 | 413 | ಬಿ.ಎಸ್. ಶಿವರಾಜೇಂದ್ರ ಪ್ರಸಾದ್, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು. |
| | | **ಪರಿಶಿಷ್ಟ ಜಾತಿ:-** |
| 06 | 431 | ಎನ್.ಸಿ.ಕೇಶವಮೂರ್ತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಮಳವಳ್ಳಿ, ತಾ. ಮಂಡ್ಯ ಜಿಲ್ಲೆ. |
| 07 | 432 | ಎ.ಸಿ.ಶಿವಲಿಂಗಯ್ಯ,ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೊರಟಗೆರೆ, ತಾ. ಮಧುಗಿರಿ ಶೈಕ್ಷಣಿಕ ಜಿಲ್ಲೆ. |
| | | **ಪರಿಶಿಷ್ಟ ಪಂಗಡ:-** |
| 08 | 438 | ಬಿ.ಎನ್.ಶೋಭ,ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಉಡುಪಿ |

(ಸಿರಿಯಣ್ಣವರ ಲಲಿತ ಚಂದ್ರಶೇಖರ್)

ನಿರ್ದೇಶಕರು(ಆಡಳಿತ)ಹೆ.ಪ್ರ.

ಅನುಬಂಧ-1

ಬಡ್ತಿ ಮುಂದೂಡಿರುವ ಅಧೀಕ್ಷಕರುಗಳ ವಿವರ.

| ಕ್ರಮ ಸಂಖ್ಯೆ | ಜೇಷ್ಠತಾ ಸಂಖ್ಯೆ | ಬಡ್ತಿ ಹೊಂದಿದ ನೌಕರರ ಹೆಸರು/ಪದನಾಮ/ಕಛೇರಿ ಹೆಸರು ಶ್ರೀ / ಶ್ರೀಮತಿ |
|---|---|---|
| 01 | 267 | ಪುಷ್ಪಲತಾ, ಅಧೀಕ್ಷಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು. |
| 02 | 298 | ಪಿ.ಎಂ. ನಿರ್ಮಲ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ. |
| 03 | 300 | ಪಿ. ಶೋಭಾದೇವಿ, ಅಧೀಕ್ಷಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು |
| 04 | 302 | ಬಿ.ಎನ್. ಹೇಮಲತಾ, ಅಧೀಕ್ಷಕರು, ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು |
| 05 | 304 | ಪಿ.ಎಂ. ಶ್ರೀಶೈಲಮೂರ್ತಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ-1, ರಾಜಾಜಿನಗರ, 2ನೇ ಹಂತ, ಪಿ&ಟಿ ರಸ್ತೆ, ಬೆಂಗಳೂರು-10 |
| 06 | 321 | ಹೆಚ್.ಸಿ. ಶಿವಣ್ಣ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ. |
| 07 | 326 | ಡಿ.ಎಸ್. ಸಂಪತ್ ಕುಮಾರ್, ಅಧೀಕ್ಷಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು |
| 08 | 327 | ಡಿ.ಟಿ. ಮೀನಾಕುಮಾರಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ-3 ಕೆ.ಕಾಮರಾಜರಸ್ತೆ, ಶಿವಾಜಿನಗರ, ಬೆಂಗಳೂರು-42 |
| 09 | 359 | ಪಿ. ಲತಾ, ಅಧೀಕ್ಷಕರು, ಕರ್ನಾಟಕ ಶಿಕ್ಷಕರ ಕಲ್ಯಾಣ ನಿಧಿ ಕಛೇರಿ, ಕೆ.ಜಿ ರಸ್ತೆ, ಬೆಂಗಳೂರು |
| 10 | 360 | ಉಮೇಶ, ಅಧೀಕ್ಷಕರು, ಸರ್ಕಾರಿ ವಿಭಾಗೀಯ ಪಠ್ಯ ಪುಸ್ತಕ ಮಳಿಗೆ, ಬೊಮ್ಮನಹಳ್ಳಿ, ಹೊಸೂರು ರಸ್ತೆ, ಬೆಂಗಳೂರು |
| 11 | 367 | ಕೆ.ಹೆಚ್.ಚಂದ್ರಿಕಾರಾಣಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ,ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ |
| 12 | 387 | ಲಕ್ಷ್ಮಮ್ಮ.ಎಂ. ಅಧೀಕ್ಷಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು |
| 13 | 388 | ಬಿ.ಬಸವರಾಜಪ್ಪ, ಅಧೀಕ್ಷಕರು,ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಶಿಕಾರಿಪುರ ತಲ್ಲೂಕು, ಶಿವಮೊಗ್ಗ ಜಿಲ್ಲೆ. |
| 14 | 395 | ಎನ್. ವಿನಯ್‌ಕುಮಾರ್, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಮಂಡ್ಯ ಜಿಲ್ಲೆ, ಮಂಡ್ಯ |
| 15 | 400 | ಎಸ್ ವಿ.ಪ್ರಸನ್ನ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಉಡುಪಿ ಜಿಲ್ಲೆ, ಉಡುಪಿ |
| 16 | 430 | ಎಲ್.ನಿಂಗಾನಾಯ್ಕ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ, |

(ಸಿರಿಯಣ್ಣವರ ಲಲಿತ ಚಂದ್ರಶೇಖರ್)

ನಿರ್ದೇಶಕರು(ಆಡಳಿತ)ಹೆ.ಪ್ರ.

25/11/20

# ನಮೂನೆ

## ನೌಕರರ ಸೇವಾ ವಿವರ

| ಕ್ರ.ಸಂ. | ಅಧಿಕಾರಿಗಳ ಸೇವಾ ವಿವರ | ಮಾಹಿತಿ | |
|---|---|---|---|
| 1 | ಅಧೀಕ್ಷಕರ ಹುದ್ದೆಯ ಜೇಷ್ಠತಾ ಸಂಖ್ಯೆ | | |
| 2 | ಪ್ರಥಮ ಕೆ.ಜಿ.ಐ.ಡಿ. ಸಂಖ್ಯೆ | | |
| 3 | ಅಧೀಕ್ಷಕರ ಹೆಸರು | | |
| 4 | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ಪೂರ್ಣ ವಿಳಾಸ | | |
| 5 | ಮೊಬೈಲ್ ಸಂಖ್ಯೆ : | | |
| 6 | ಜನ್ಮ ದಿನಾಂಕ | | |
| 7 | ಅದೀಕ್ಷಕರ ಹುದ್ದೆಯಲ್ಲಿ ಬಡ್ತಿ ಸಕ್ರಮಗೊಂಡ ದಿನಾಂಕ | | |
| 8 | ಗುಂಪು (ಪ.ಜಾತಿ, ಪ.ವರ್ಗ/ ಇತರೆ ) | | |
| 9 | ಇಲಾಖಾ ಪರೀಕ್ಷಗಳಲ್ಲಿ ಉತ್ತೀರ್ಣತೆ<br>1. ಅಕೌಂಟ್ಸ್ ಹೈಯರ್<br>2. ಜನರಲ್ ಲಾ ಭಾಗ 1&2<br>3. ಕನ್ನಡ ಭಾಷಾ ಪರೀಕ್ಷೆ | **ನೋಂದಣಿ ಸಂಖ್ಯೆ** | **ದಿನಾಂಕ** |
| 10 | ಕಾರ್ಯನಿರ್ವಹಣಾ ವರದಿಗಳು 2015-16 ರಿಂದ 2019-20 ರವರೆಗೆ ವರ್ಷವಾರು ಪ್ರತ್ಯೇಕವಾಗಿ ಸಲ್ಲಿಸುವುದು<br>[ಕಾರ್ಯನಿರ್ವಹಣಾ ವರದಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ವಿಶೇಷ ವರದಿ ಸಲ್ಲಿಸತಕ್ಕದ್ದು] | 2015-16 | |
| | | 2016-17 | |
| | | 2017-18 | |
| | | 2018-19 | |
| | | 2019-20 | |
| 11 | ಇಲಾಖಾ ವಿಚಾರಣೆ / ದೂರು/ ನ್ಯಾಯಲಯದ ಪ್ರಕರಣಗಳು ಇದ್ದಲ್ಲಿ ವಿವರ | | |
| 12. | ಪರಿಶಿಷ್ಟ ಜಾತಿ/ವರ್ಗದ ನೌಕರರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು. | | |
| 13 | ಷರಾ | | |

ಮೇಲ್ಕಂಡ ಎಲ್ಲಾ ಅಂಶಗಳು ಸಂಬಂಧಿತ ಸಿಬ್ಬಂದಿಗಳ ಸೇವಾ ವಿವರವನ್ನು ಅವರ ಸೇವಾ ಪುಸ್ತಕದೊಂದಿಗೆ ಪರಿಶೀಲಿಸಿ, ಮಾಹಿತಿಯನ್ನು ನೀಡಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ :

ಸ್ಥಳ :

ಕಛೇರಿ ಮುಖ್ಯಸ್ಥರ ಸಹಿ
ಮೊಹರಿನೊಂದಿಗೆ